ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ. 4357/2022

| | | | |
|---|---|---|---|
| ಹೆಸರು | : | ಸಂಪತ್ ಕುಮಾರ್ | ಸಿ .ಡಬ್ಲ್ಯೂ :2 |
| ತಂದೆ ಹೆಸರು | : | ನರಸಿಂಹಯ್ಯ | ಪಿ .ಡಬ್ಲ್ಯೂ :2 |
| ವಯಸ್ಸು | : | 26 ವರ್ಷ | |
| ಉದ್ಯೋಗ | : | - | |
| ವಾಸಸ್ಥಳ | : | ಮೂಡನಗಿರಿಯನಪಾಳ್ಯ | |

ಸಾಕ್ಷಿಯನ್ನು ದಿಃ12-11-2024 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ಚಾಸಾ -1 ನಮ್ಮ ತಂದೆ , ಚಾಸಾ-3 ನನಗೆ ಪರಿಚಿತರು . ಆರೋಪಿತರನ್ನು ನೋಡಿದ್ದೇನೆ . ದಿಃ01-09-2022 ರಂದು ನನಗೆ ಅಪಘಾತವಾಗಿತ್ತು . ನಾನು ನಮ್ಮ ಊರಾದ ಮೂಡನಗಿರಿಯನಪಾಳ್ಯ ದಿಂದ ಗುಬ್ಬಿಗೆ ಕೆಲಸಕ್ಕೆಂದು ಬೆಳಗ್ಗೆ 7.00 ಗಂಟೆ ಸಮಯದಲ್ಲಿ ಗುಬ್ಬಿಗೆ ಬರುವಾಗ ಗೋಪಾಲಪುರ ಗೇಟ್ ಬಳಿ ಅಪಘಾತ ನಡೆಯಿತು . ನಾನು ದ್ವಿಚಕ್ರ ವಾಹನ ಸಂಖ್ಯೆ KA-06-S-4595 ಸ್ಪೆಂಡರ್ ಪ್ಲೆಸ್ ನಲ್ಲಿ ಬರುವಾಗ ಕೆ ಎಸ್ ಆರ್ ಟಿ ಸಿ ಬಸ್ ಸಂಖ್ಯೆ KA-06-F-0826 ವಾಹನ ಅಪಘಾತಪಡಿಸಿತು . ನಾನು ಗುಬ್ಬಿ ಕಡೆಯಿಂದ ಬರುತ್ತಿರುವಾಗ ಗುಬ್ಬಿ ಕಡೆಯಿಂದ ವೇಗವಾಗಿ ಬಂದು ಕೆ ಎಸ್ ಆರ್ ಟಿ ಸಿ ಬಸ್ ಅಪಘಾತಪಡಿಸಿತು . ಅಪಘಾತದಿಂದ ನನಗೆ ಕೈ ಕಾಲು , ತಲೆಗೆ , ಕಿವಿಗೆ ಪೆಟ್ಟಾಗಿತ್ತು . ಬಲ ಕಿವಿ ಕೇಳಿಸುವುದಿಲ್ಲ . ಚಾಸಾ -3 ರವರು ನನ್ನನ್ನು ಅಪಘಾತ ಸ್ಥಳದಲ್ಲಿ ಉಪಚರಿಸಿ ಅದೇ ಬಸ್ಸಿನಲ್ಲಿ ಗುಬ್ಬಿ ಸರ್ಕಾರಿ ಆಸ್ಪತ್ರೆ ಗೆ ಚಿಕಿತ್ಸೆಗೆಂದು ಕರೆ ತಂದರು . ನಂತರ ಹೆಚ್ಚಿನ ಚಿಕಿತ್ಸೆಗಾಗಿ ತುಮಕೂರು ಜಿಲ್ಲಾ ಆಸ್ಪತ್ರೆ ಮತ್ತು ಅಲ್ಲಿಂದ ಬೆಂಗಳೂರಿನ ನಿಮಾನ್ಸ್ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿದ್ದೇನೆ. ಅಪಘಾತ ಸ್ಥಳವು ವೃತ್ತವಾಗಿದ್ದು , ಬಸ್ಸು ಬರುತ್ತಿರುವುದು ಕಾಣಿಸುತ್ತಿರಲಿಲ್ಲ, ಅವರು ವೇಗವಾಗಿ ಬಂದು ಈ ಅಪಘಾತ ಮಾಡಿದ್ದಾರೆ . ಅಪಘಾತದ ಕುರಿತು ಪೊಲೀಸರ ಮುಂದೆ ನಿಮಾನ್ಸ್ ನಿಂದ ಹಿಂತಿರುಗಿದ ನಂತರ ಹೇಳಿಕೆ ನೀಡಿದ್ದೇನೆ .

ಪಾಟೀಸವಾಲು: ಆರೋಪಿ ಪರ ವಕೀಲರಿಂದಃ-

ನಾನು ಪದವಿ ವ್ಯಾಸಾಂಗ ಮಾಡಿದ್ದೇನೆ . ಹೊಸಹಳ್ಳಿ ಕ್ರಾಸ್ ನಿಂದ ಗೋಪಾಲಪುರ

ಗೇಟ್ 3 ಕಿಲೋ ಮೀಟರ್ ಆಗುತ್ತದೆ ಎಂದರೆ ಸರಿ . ಸಿ ಎಸ್ ಪುರ ಗುಬ್ಬಿ ರಸ್ತೆ ರಾಜ್ಯ ಹೆದ್ದಾರಿಯಾಗಿದ್ದು 60 ಅಡಿ ಅಗಲದ ರಸ್ತೆ ಎಂದರೆ ಸರಿ . ನಮ್ಮ ಗ್ರಾಮದಿಂದ ಮುಖ್ಯ ರಸ್ತೆಗೆ ಸೇರುವ ಸ್ಥಳದಲ್ಲಿ ರಸ್ತೆ ಡುಬ್ಬವನ್ನು ನಿರ್ಮಿಸಲಾಗಿದೆ ಎಂದರೆ ಸಾಕ್ಷಿಯು ಆಗ ಇರಲಿಲ್ಲ ಈಗ ನಿರ್ಮಿಸಿದ್ದಾರೆ ಎಂದು ತಿಳಿಸಿದ್ದಾರೆ . ಮೇಲೆ ಹೇಳಿದ ವೃತದ ಬಳಿ ಹೇರ್ ಕಟ್ಟಿಂಗ್ ಸಲೂನ್ , 4 ಅಂಗಡಿಗಳು , 1 ಮಿಲ್ , ವಾಸದ ಮನೆಗಳು ಇವೆ ಎಂದರೆ ಸಾಕ್ಷಿಯು ವಾಸದ ಮನೆ ಒಂದು ಮಾತ್ರ ಇದೆ ಎಂದು ತಿಳಿಸಿದ್ದಾರೆ . ಗೋಪಾಲಪುರ ಗೇಟ್‌ನ ಬಳಿ ಸುಮಾರು 15 ರಿಂದ 20 ಹಳ್ಳಿಗಳ ಜನರು ಬಸ್ಸಿಗಾಗಿ ಬರಬೇಕು ಎಂದರೆ ಸಾಕ್ಷಿಯು 2 -3 ಹಳ್ಳಿಗಳು ಮಾತ್ರ ಬರುತ್ತಾರೆ ಎಂದು ತಿಳಿಸಿದ್ದಾರೆ , ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಚಾಸಾ -3 ರವರು ನನ್ನ ಹತ್ತಿರದ ಸಂಬಂಧಿಕರು ಎಂದರೆ ಸರಿ . ಅವರು ನಮ್ಮ ಪಕ್ಕದ ಗ್ರಾಮದವರು ಎಂದು ತಿಳಿಸಿದ್ದಾರೆ . ಹೊಸಹಳ್ಳಿ ಕ್ರಾಸ್ ನಿಂದ ಗೋಪಾಲಪುರ ಗೇಟ್ ರಸ್ತೆ ಏರು ಮುಖವಾಗಿದೆ ಎಂದರೆ ಸರಿಯಲ್ಲ . ಅಪಘಾತವು ರಸ್ತೆಯ ಎಡಭಾಗದಲ್ಲಿ ನಡೆದಿದೆ . ಪಶ್ಚಿಮ ದಿಕ್ಕಿಗೆ ಎದುರುಭಾಗದ ರಸ್ತೆ 50 ಅಡಿ ಇದೆ ಎಂದರೆ ಸರಿ . ನಾನು ದ್ವಿಚಕ್ರ ವಾಹನದಲ್ಲಿ ಗುಬ್ಬಿಗೆ ಬಂದು ಫೈನಾನ್ಸ್ ಬಳಿ ಗಾಡಿಯನ್ನು ನಿಲ್ಲಿಸಿ ಸಂಸ್ಥೆಗೆ ಸೇರಿದ ವಾಹನದಲ್ಲಿ ಹಣದ ಕಂತು ಸಂಗ್ರಹಿಸಲು ಹೋಗುತ್ತಿದ್ದೆ ಎಂದರೆ ಸಾಕ್ಷಿಯು ನನ್ನ ಮೋಟರ್ ಬೈಕ್ ನಲ್ಲಿ ಹೋಗುತ್ತಿದ್ದೆ ಎಂದು ತಿಳಿಸಿದ್ದಾರೆ . ನಾನು ಗ್ರಾಮದಿಂದ ಬಂದ ನಂತರ ಫೈನಾನ್ಸ್ ಕಚೇರಿಗೆ ಹೋಗಿ ನಾನು ಬಂದಿರುವ ಕುರಿತು ಹಾಜರಾತಿ ಹಾಕಿ ನಂತರ ಕಲೆಕ್ಷನ್ ಹೋಗುತ್ತಿದ್ದೆ ಎಂದರೆ ಸರಿ . ಸೆಪ್ಟೆಂಬರ್ 2022 ನೇ ಸಾಲಿನಲ್ಲಿ ಹೆಚ್ಚು ಮಳೆ ಇತ್ತು ಎಂದರೆ ಸರಿಯಲ್ಲ . ಮೇಲೆ ಹೇಳಿದ ದಿನಾಂಕದಂದು ಬೈಕ್ ಓಡಿಸುವಾಗ ನಾನು ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿ . ನಾನು ಕೆಲಸಕ್ಕೆ ಹೋಗಲು ತಡವಾಗಿದ್ದ ಕಾರಣ ವೇಗವಾಗಿ ಬೈಕ್ ಚಲಾಯಿಸಿಕೊಂಡು ಬಂದು ರಸ್ತೆ ವಿಭಜಕ್ಕೆ ಡಿಕ್ಕಿ ಪಡಿಸಿಕೊಂಡಿದ್ದೇನೆ , ನನ್ನ ತಪ್ಪಿನಿಂದಲೇ ಅಪಘಾತವಾಗಿದೆ ಎಂದರೆ ಸರಿಯಲ್ಲ . ನಾನು ಮೇಲೆ ಹೇಳಿದ ಸಂಖ್ಯೆಯ ಬಸ್ ಗೋಪಾಲಪುರ ಗೇಟ್ ನ ಬಳಿ ಪ್ರಯಾಣಿಕರನ್ನು ಹತ್ತಿಸಿಕೊಳ್ಳುತ್ತಿತ್ತು , ಆ ಬಸ್ಸಿನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ . ನಾನು ಬೈಕ್ ನಿಂದ ಬಿದ್ದು ಅಪಘಾತ ಮಾಡಿಕೊಂಡಿದ್ದ ಕಾರಣ ಮಾನವೀಯತೆಯ ದೃಷ್ಟಿಯಿಂದ ಆರೋಪಿತರು ಮತ್ತು ಬಸ್ಸಿನಲ್ಲಿದ್ದ ಪ್ರಯಾಣಿಕರು ನನ್ನನ್ನು ಆಸ್ಪತ್ರೆಗೆ ತಂದು ದಾಖಲಿಸಿದ್ದಾರೆ ಎಂದರೆ ಸರಿಯಲ್ಲ .

ನಾನು ಚಲಾಯಿಸುತ್ತಿದ್ದ ಮೋಟರ್ ಬೈಕ್ ಗೆ ವಿಮೆ ಇರಲಿಲ್ಲ ಎಂದರೆ

ಸರಿಯಲ್ಲ . ಅದೇ ಕಾರಣಕ್ಕಾಗಿ ನಾನು ನನ್ನ ತಂದೆ ಮತ್ತು ಚಾಸಾ -3 ರವರು ಪೊಲೀಸರೊಡನೆ ಶಾಮೀಲಾಗಿ ಆರೋಪಿತರ ವಿರುದ್ಧ ಅವರು ಚಲಾಯಿಸುತ್ತಿದ್ದ ಬಸ್ಸಿನಿಂದ ಅಪಘಾತವಾಗಿದೆ ಎಂದು ಸುಳ್ಳು ವಿವರಗಳ ದೂರು ನೀಡಿದ್ದೇನೆ ಎಂದರೆ ಸರಿಯಲ್ಲ . ನನ್ನ ಸಂಬಂಧಿಕರು ಈ ಪ್ರಕರಣದಲ್ಲಿ ಶಾಮೀಲಾಗಿದ್ದಾರೆ ಎಂದರೆ ಸರಿಯಲ್ಲ . ಅಪಘಾತದ ಪರಿಹಾರ ಪಡೆಯುವ ಉದ್ದೇಶದಿಂದ 2 ದಿನ ತಡವಾಗಿ ಬಸ್ಸಿನ ವಿರುದ್ಧ ದೂರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ .

ಯಾವ ದಿನಾಂಕದಂದು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೀರಾ ಎಂದರೆ ನಿಖರವಾಗಿ ಹೇಳಲು ಆಗುವುದಿಲ್ಲ ಎಂದು ತಿಳಿಸಿದ್ದಾರೆ . ಈ ಅಪಘಾತಕ್ಕೂ ಆರೋಪಿತರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ . ಗೋಪಾಲಪುರ ಗೇಟ್ ನ ಕಡೆಗೆ ರಸ್ತೆ ಏರು ಮುಖವಾಗಿರುವ ಕಾರಣ ಯಾವುದೇ ವಾಹನಗಳು ವೇಗವಾಗಿ ಬರುಲು ಸಾಧ್ಯವಿಲ್ಲ , ಅಲ್ಲದೆ ಸೆಪ್ಟೆಂಬರ್ 2022 ರಂದು ಹೆಚ್ಚು ಮಳೆ ಇದ್ದ ಕಾರಣ ಮಂಜಿನ ವಾತಾವರಣವಿತ್ತು ನಾನು ಹೇಳುವಂತೆ ಬಸ್ಸಿನಿಂದ ಅಪಘಾತ ನಡೆದಿಲ್ಲ ಎಂದರೆ ಸರಿಯಲ್ಲ .

<u>ಮರುವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

Sd/-
(ಅನುಪಮ.ಡಿ )
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.